**3** ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ**,**ರವರ ನ್ಯಾಯಾಲಯ**,**
ಕಡೂರು**.**

**<u>ಸಿ.ಸಿ.ನಂ.4111/2023</u>**

<u>ಫಿರ್ಯಾದುದಾರರು</u> : ಸರ್ಕಾರದ ಪರವಾಗಿ ಬೀರೂರು ಪೊಲೀಸರಿಂದ

-ವಿರುದ್ಧ-

<u>ಆರೋಪಿ :</u> ರಾಜಪ್ಪ.

**<u>-: ದೋಷಾರೋಪಣೆ :-</u>**

ಶ್ರೀ ತಾಹಾಕಲೀಲ್ ಕೆ.ಎ.**,** ಬಿ.ಎ. ಎಲ್‌ಎಲ್.ಬಿ., 3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಕಡೂರು ಆದ ನಾನು ಈ ಕೆಳಗೆ ಕಾಣಿಸಿರುವಃ

ಶ್ರೀ ರಾಜಪ್ಪ ಬಿನ್ ಮೈಲಾರಪ್ಪ,
68 ವರ್ಷ, ಕೂಲಿ ಕೆಲಸ,
ವಾಸಃ ಅಂಬೇಡ್ಕರ್ ನಗರ,
ಸರಸ್ವತಿಪುರಂ, ಬೀರೂರು ಟೌನ್,
ಕಡೂರು ತಾಲ್ಲೂಕು.

ಆದ ನಿಮ್ಮ ವಿರುದ್ಧ ಈ ಕೆಳಗಿನಂತೆ ಹೊರಿಸಿರುವ ದೋಷಾರೋಪಣೆ ಮಾಡುವುದೇನೆಂದರೆಃ

ದಿನಾಂಕಃ 06.08.2023 ರಂದು ರಾತ್ರಿ 7-15 ರ ಸಮಯದಲ್ಲಿ ಬೀರೂರು ಠಾಣಾ ಸರಹದ್ದಿನ ಅಜ್ಜಂಪುರ ರಸ್ತೆಯಲ್ಲಿ ಆರೋಪಿಯಾದ ನೀವು 90 ಎಂ.ಎಲ್.ನ 35 ನಂಬರ್-1 ಹೈವೇ ಡೀಲಕ್ಸ್ ಫೈನ್ ವಿಸ್ಕಿ ಮದ್ಯ ತುಂಬಿದ ಪೌಚುಗಳನ್ನು ಯಾವುದೇ ಪರವಾನಗಿ ಇಲ್ಲದೇ ಅಕ್ರಮವಾಗಿ ಸಾರ್ವಜನಿಕ ಮಾರಾಟ ಮಾಡುವ ಉದ್ದೇಶದಿಂದ ಸಾಗಾಟ ಮಾಡುತ್ತಿದ್ದೀರಿ. ಆದ್ದರಿಂದ ಕರ್ನಾಟಕ ಅಬಕಾರಿ ಕಾಯ್ದೆ ಕಲಂ ೩೨ ರೀತ್ಯಾ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ಎರಡನೇಯದಾಗಿ, ಅದೇ ದಿನ, ಸಮಯ ಹಾಗೂ ಅದೇ ಸ್ಥಳದಲ್ಲಿ ಆರೋಪಿಯಾದ ನೀವು 90 ಎಂ.ಎಲ್.ನ ಸುಮಾರು 979 ರೂ ಬೆಲೆ ಬಾಳುವ ನಂ.1 ಹೈವೇ ಡೀಲಕ್ಸ್ ಫೈನ್ ವಿಸ್ಕಿಯ ೩೫ ಮದ್ಯದ ಪೌಚುಗಳನ್ನು ಯಾವುದೇ ಪರವಾನಗಿ ಇಲ್ಲದೆ ಅಕ್ರಮವಾಗಿ ಸಾರ್ವಜನಿಕರಿಗೆ ಮಾರಾಟ ಮಾಡುವ ಉದ್ದೇಶದಿಂದ ದಾಸ್ತಾನು ಹೊಂದಿದ್ದೀರಿ.

ಆದ್ದರಿಂದ ಕರ್ನಾಟಕ ಅಬಕಾರಿ ಕಾಯ್ದೆ ಕಲಂ ೩೪ ರೀತ್ಯಾ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ಈ ಆರೋಪಗಳ ಮೇಲೆ ನೀವು ಈ ನ್ಯಾಯಾಲಯದ ಆರೋಪ ವಿಚಾರಣೆಗೆ ಗುರಿಯಾಗತಕ್ಕದೆಂದು ನಾನು ಈ ಮೂಲಕ ನಿರ್ದೇಶಿಸುತ್ತೇನೆ.

ಸಹಿ/-

**(ತಾಹಾಕಲೀಲ್ ಕೆ.ಎ.)**

3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು

ಮತ್ತು ಪ್ರ.ದ.ನ್ಯಾ.ದಂ. ಕಡೂರು.

ದಿನಾಂಕಃ 25.07.2024.

<u>**3** ನೇ ಹೆಚ್ಚುವರಿ  ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ**,**ರವರ ನ್ಯಾಯಾಲಯ**,**</u>  ಕಡೂರು**.**

ಸಿ.ಸಿ.ಳ೧೧೧/2023

ಆರೋಪಿ ಸಂಖ್ಯೆ ಃ1
ಆಪಾದಿತರ ಹೆಸರು ಃ ರಾಜಪ್ಪ
ತಂದೆಯ ಹೆಸರು ಃ ಮೈಲಾರಪ್ಪ
ವಯಸ್ಸು ಃ 68 ವರ್ಷ
ವಾಸಸ್ಥಳ ಃ ಅಂಬೇಡ್ಕರ್ ನಗರ, ಸರಸ್ವತಿಪುರ, ಬೀರೂರು ಟೌನ್.

<u>ದಂಡ ಪ್ರಕ್ರಿಯಾ ಸಂಹಿತೆ ಕಲಂ **240(2)** ಅಡಿ ಪ್ರಕಾರ ಆರೋಪಿಯ ಹೇಳಿಕೆಃ</u>

ಪ್ರಃ 1) ನಿಮಗೆ ಓದಿ ಹೇಳಲಾದ ಆರೋಪಣೆಯನ್ನು ನೀವು ಕೇಳಿ ತಿಳಿದುಕೊಂಡಿರುವಿರಾ?
ಉಃ
ಪ್ರಃ 2) ಸದರಿ ಆರೋಪಣೆಗಳನ್ನು ನೀವು ಒಪ್ಪಿಕೊಳ್ಳುತ್ತೀರಾ ಅಥವಾ ವಿಚಾರಣೆಯಾಗಬೇಕೆ?
ಉಃ

ಮೇಲ್ಕಾಣಿಸಿದ ಹೇಳಿಕೆಯನ್ನು ದಿನಾಂಕ ರಂದು ದಾಖಲಿಸಿಕೊಂಡಿದ್ದು, ಆರೋಪಿಯು ನೀಡಿದ ಉತ್ತರವನ್ನು ಯಥಾವತ್ತಾಗಿ ದಾಖಲಿಸಿಕೊಂಡಿರುತ್ತೇನೆಂದು ಈ ಮೂಲಕ ಧೃಡೀಕರಿಸುತ್ತೇನೆ.

ಸಹಿ/-
3 ನೇ ಹೆಚ್ಚುವರಿ  ಪ್ರಃದಃನ್ಯಾಃದಂಃಕಡೂರು.